ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ: 21–1–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಆಯುಷ್ ಆರೋಗ್ಯ ರೈತ ಸಮಾವೇಶ:<br>ಉದ್ಘಾಟನೆ:<br><br>ಶ್ರೀ ಕೃಷ್ಣಭೈರೇಗೌಡ,<br>ಕೃಷಿ ಸಚಿವರು | 22–1–2015<br>ಗುರುವಾರ<br>ಬೆಳಗ್ಗೆ<br>10–00 ಗಂಟೆಗೆ | ಆರ್.ಬಿ.ಎ.ಎನ್.ಎಂ. ಮೈದಾನ<br>ಹಲಸೂರು,<br>ಬೆಂಗಳೂರು |
| 2 | 1 ರಿಂದ 10 ನೇ ತರಗತಿ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿಗಳ ಪೂರ್ವಭಾವಿ ಸಭೆ:<br><br>ಅಧ್ಯಕ್ಷತೆ:<br><br>ಶ್ರೀ ಕಿಮ್ಮನೆ ರತ್ನಾಕರ<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು | 22–1–2015<br>ಗುರುವಾರ<br>ಬೆಳಗ್ಗೆ<br>10–15 ಗಂಟೆಗೆ | ಶಿಕ್ಷಕರ ಸದನ<br>ಕೆಂಪೇಗೌಡ ರಸ್ತೆ,<br>ಕಾವೇರಿ ಭವನದ ಎದುರು<br>ಬೆಂಗಳೂರು |
| 3 | ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ:<br><br>ಉದ್ಘಾಟನೆ:<br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು<br><br>ಅಧ್ಯಕ್ಷತೆ:<br>ಶ್ರೀ ಕಾಗೋಡು ತಿಮ್ಮಪ್ಪ,<br>ಸಭಾಧ್ಯಕ್ಷರು,<br>ಕರ್ನಾಟಕ ವಿಧಾನ ಸಭೆ | 22–1–2015<br>ಗುರುವಾರ<br>ಮಧ್ಯಾಹ್ನ<br>2–30 ಗಂಟೆಗೆ | ಶ್ರೀ ಚನ್ನಬಸಪ್ಪ ಸಭಾಂಗಣ,<br>ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್<br>ಕಬ್ಬನ್‌ಪಾರ್ಕ್<br>ಕೆ.ಆರ್. ವೃತ್ತ,<br>ಬೆಂಗಳೂರು |

| | | | |
|---|---|---|---|
| | ಮುಖ್ಯ ಅತಿಥಿಗಳು:<br>ಶ್ರೀ ಕಿಮ್ಮನೆ ರತ್ನಾಕರ<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು | | |
| 3 | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಸಮಾರೋಪ ಕಾರ್ಯಕ್ರಮ:<br>ಪಾಲ್ಗೊಳ್ಳುವವರು:<br><br>ಶ್ರೀ ಸಿದ್ಧರಾಮಯ್ಯ,<br>ಮುಖ್ಯ ಮಂತ್ರಿಗಳು, ಕರ್ನಾಟಕ<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್.ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಸಚಿವರು<br><br>ಡಾ: ಹೆಚ್.ಸಿ. ಮಹದೇವಪ್ಪ,<br>ಲೋಕೋಪಯೋಗಿ ಸಚಿವರು<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಖಾತೆ ಸಚಿವರು | 22-1-2015<br>ಗುರುವಾರ<br>ಸಂಜೆ<br>4-00ಗಂಟೆಗೆ | ಡಾ: ಅನಿಬೇಸಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಶಿಬಿರ ಕೇಂದ್ರ,<br>ದೊಡ್ಡಬಳ್ಳಾಪುರ<br>ಬೆಂಗಳೂರು ಗ್ರಾಮಾಂತರ ಜಿಲ್ಲೆ<br><br>ವಿ.ಸೂ.:<br><br>ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ಯಲು ಅಂದು ಮಧ್ಯಾಹ್ನ 2-30 ಗಂಟೆಗೆ ವಾರ್ತಾ ಸೌಧದಿಂದ ವಾಹನ ವ್ಯವಸ್ಥೆ ಮಾಡಲಾಗಿದೆ. |

ನಿರ್ದೇಶಕರ ಪರವಾಗಿ

## ಮಾಧ್ಯಮದವರ ಗಮನಕ್ಕೆ

**ಜನವರಿ 26 ರ ಗಣರಾಜ್ಯೋತ್ಸವದ ಅಂಗವಾಗಿ ರಾಜ್ಯಪಾಲರು ರಾಜಭವನದಲ್ಲಿ ಸಂಜೆ 5.00 ಗಂಟೆಗೆ ಏರ್ಪಡಿಸಿರುವ ಚಹಾ ಕೂಟದ ವರದಿಗಾಗಿ ಆಗಮಿಸುವ ಮಾನ್ಯತೆ ಪಡೆದ ಮಾಧ್ಯಮ ಪ್ರತಿನಿಧಿಗಳು ಜನವರಿ 20 ರಿಂದ ಜನವರಿ 24 ರವರೆಗೆ ಕಛೇರಿ ವೇಳೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ಆಹ್ವಾನ ಪತ್ರಿಕೆಯನ್ನು ಪಡೆದುಕೊಳ್ಳಬಹುದಾಗಿದೆ.**

## ಮಾಧ್ಯಮದವರ ಗಮನಕ್ಕೆ

ಫೆಬ್ರವರಿ 2 ರಿಂದ 13 ರವರೆಗೆ ನಡೆಯಲಿರುವ 14 ನೇ ವಿಧಾನ ಸಭೆಯ ಆರನೇ ಅಧಿವೇಶನದ ಕಲಾಪಗಳನ್ನು ವರದಿ ಮಾಡಲು ಮಾಧ್ಯಮ ಪ್ರತಿನಿಧಿಗಳಿಗೆ ಸ್ಮಾರ್ಟ್‌ಕಾರ್ಡ್ ಮಾದರಿಯಲ್ಲಿ ಪತ್ರಕರ್ತರ ವೇದಿಕೆ ಪಾಸುಗಳನ್ನು ಸಚಿವಾಲಯದಿಂದ ವಿತರಿಸಲು ತೀರ್ಮಾನಿಸಲಾಗಿದೆ.

ಈ ಸಂಬಂಧ ಶಾಸನ ಸಭೆಯ ನಡವಳಿಗಳನ್ನು ವರದಿ ಮಾಡುವ ಬೆಂಗಳೂರು ಆವೃತ್ತಿಯ ಪ್ರಮುಖ ದಿನ ಪತ್ರಿಕೆಗಳ ಹಾಗೂ ಪ್ರಮುಖ ಸುದ್ದಿ ವಾಹಿನಿಗಳ ***ಕನಿಷ್ಠ ಮೂವರು ವರದಿಗಾರರಿಗೆ ಮಾತ್ರ*** ಪತ್ರಕರ್ತರ ವೇದಿಕೆ ಪಾಸ್‌ಗಳನ್ನು ನೀಡಲಾಗುವುದು. ಪತ್ರಿಕಾ ಛಾಯಾಗ್ರಾಹಕರು ಮತ್ತು ಕ್ಯಾಮರಾಮನ್‌ಗಳಿಗೆ ಹಿಂದಿನ ರೀತಿಯಲ್ಲಿಯೇ ಪಾಸ್‌ನ್ನು ವಿತರಿಸಲಾಗುವುದು. ಆದ್ದರಿಂದ ಮಾಧ್ಯಮ ಸಂಸ್ಥೆಯ ಸುದ್ದಿ ಮುಖ್ಯಸ್ಥರ ಶಿಫಾರಸ್ಸು ಪತ್ರದೊಂದಿಗೆ ಪಾಸ್‌ಪೋರ್ಟ್ ಅಳತೆಯ 2 ಫೋಟೋಗಳನ್ನು ***ಜನವರಿ 23 ರೊಳಗಾಗಿ*** ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

## ಪತ್ರಿಕಾ ಪ್ರಕಟಣೆ

## ಸರ್ಕಾರದ ಕಾಯ ಕ್ರಮಗಳಿಗೆ ವಿಶೇಷ ಪ್ರಚಾರಾಂದೋಲನ

**ಬೆಂಗಳೂರು, ಜ. 21 (ಕನಾ ಟಕ ವಾತೆ )** : ಜನ ಸಾಮಾನ್ಯರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ವಿವಿಧ ಯೋಜನೆಗಳ ಬಗ್ಗೆ ಜನರಲ್ಲಿ ಅರಿವನ್ನು ಉಂಟುಮಾಡಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಧುನಿಕ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿದ್ದು, ಇದಕ್ಕೆ ಪೂರಕವಾಗಿ ದೃಶ್ಯ – ಶ್ರವ್ಯ ಹಾಗೂ ಕಲಾವಿದರಿಂದ ಕೂಡಿರುವ 'ಕಲಾಜಾಥ' ವಾಹನಗಳ ಮೂಲಕ ರಾಜ್ಯದ ಐದು ಜಿಲ್ಲೆಗಳಲ್ಲಿರುವ 1000 ಹಳ್ಳಿಗಳಲ್ಲಿ ಪ್ರಚಾರ ಕೈಗೊಳ್ಳುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಈ ದಿಶೆಯಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸಲು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಇಂದು ವಿಧಾನ ಸೌಧದ ಆವರಣದಲ್ಲಿ ಇಂದು ಸಾಂಕೇತಿಕವಾಗಿ ವಿಶೇಷ ಪ್ರಚಾರ ವಾಹನಗಳಿಗೆ ಚಾಲನೆ ನೀಡಿದರು.

ಪ್ರಚಾರ ವಾಹನದಲ್ಲಿ ದೃಶ್ಯ – ಶ್ರವ್ಯ ಮಾಧ್ಯಮವನ್ನು ಬಳಕೆ ಮಾಡಿಕೊಂಡು ಸರ್ಕಾರದ ಯೋಜನೆಗಳ ಬಗ್ಗೆ ಜನತೆಗೆ ಮಾಹಿತಿ ನೀಡಲಾಗುವುದು. ಇದೇ ವಾಹನದಲ್ಲಿ ಕಲಾತಂಡಗಳು ಪ್ರದರ್ಶನ ನೀಡಲು ಅನುಕೂಲವಾಗುವಂತೆ ವೇದಿಕೆಯನ್ನು ಸಹ ಸಿದ್ಧಪಡಿಸಲಾಗಿದೆ. ಇದೇ ವೇದಿಕೆಯಿಂದ ಸಾಂಪ್ರದಾಯಿಕ

ಮಾಧ್ಯಮಗಳಾದ ಸಂಗೀತ ಮತ್ತು ನಾಟಕಗಳ ಮೂಲಕ ಕಲಾವಿದರು ಸರ್ಕಾರದ ಯೋಜನೆಗಳ ಬಗ್ಗೆ ಕಲಾಪ್ರದರ್ಶನ ಮೂಲಕ ಮನವರಿಕೆ ಮಾಡಿಕೊಡುವರು.

ಇದೇ ವಾಹನದ ಮಧ್ಯಭಾಗದಲ್ಲಿ ಅಳವಡಿಸಿರುವ ಪರದೆಯಲ್ಲಿ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆ ಹಾಗೂ ಸಾಧನೆಗಳ ಕಿರುಚಿತ್ರ, ಜಾಹೀರಾತು ಮತ್ತು ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುವುದು.

ರಾಜ್ಯದ ಐದು ಜಿಲ್ಲೆಗಳಲ್ಲಿ ಈ ವಿಶೇಷ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾವೇರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ ಒಂದು ಸಾವಿರ (1000) ಹಳ್ಳಿಗಳಲ್ಲಿ ಈ ವಿಶೇಷ ಪ್ರಚಾರಾಂದೋಲನವನ್ನು ಕೈಗೊಳ್ಳಲಾಗುತ್ತಿದೆ ಎಂದು **ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್** ಅವರು ತಿಳಿಸಿದರು.

## <u>ದೂರದರ್ಶನದಲ್ಲಿ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ ಪ್ರಸಾರ</u>

**ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಏರ್ಪಡಿಸಿದ್ದ ಸರ್.ಸಿ.ವಿ. ರಾಮನ್ ಸ್ಮರಣೆಯ ರಾಜ್ಯಮಟ್ಟದ ದೂರದರ್ಶನ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವು ಜನವರಿ 22 ರಿಂದ ಆರಂಭಗೊಂಡು ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9-30 ರಿಂದ ಬೆಂಗಳೂರು ದೂರದರ್ಶನದಲ್ಲ ಪ್ರಸಾರವಾಗಲಿದೆ. ಅಲ್ಲದೆ ಪ್ರಸಾರದ ಮಾರನೆ ದಿನ ಬೆಳಗ್ಗೆ 11 ಗಂಟೆಯಿಂದ 11-30 ರವರೆಗೆ ಮರು ಪ್ರಸಾರವಾಗಲಿದೆ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಪ್ರಕಟಣೆ ತಿಳಿಸಿದೆ.**

ಬಾಬು/ಕೆಎಂ

## ಕ್ಲಬ್‌ಗಳ ಸಮಗ್ರ ಮಾಹಿತಿ ಸಂಗ್ರಹಿಸಿ ಮಂಡನೆ: ಶ್ರೀ ಎ. ಮಂಜು

**ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)**

**ಮುಂದಿನ ದಿನಗಳಲ್ಲಿ ರಾಜ್ಯದಲ್ಲಿನ ಕ್ಲಬ್‌ಗಳು ಸೇರಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳಿಗೆ ಭೇಟಿ ನೀಡಿ ಅವುಗಳ ಕಾರ್ಯ ವೈಖರಿ ಮತ್ತು ಸಮಸ್ಯೆಗಳ ಕುರಿತು ಸಮಗ್ರ ವಿಚಾರಣೆ ನಡೆಸಲಾಗುವುದು ಎಂದು ಕ್ಲಬ್‌ಗಳ ಕುರಿತ ವಿಧಾನ ಮಂಡಲದ ಸದನ ಸಮಿತಿಯ ಅಧ್ಯಕ್ಷರು ಹಾಗೂ ಶಾಸಕರು ಆದ ಶ್ರೀ ಎ. ಮಂಜು ಅವರು ತಿಳಿಸಿದರು.**

**ವಿಕಾಸ ಸೌಧದಲ್ಲಿ ಇಂದು ನಡೆದ ಕ್ಲಬ್‌ಗಳ ಕಾರ್ಯ ವೈಖರಿ ಕುರಿತ ಸಮಿತಿಯ ಮೊದಲ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಎ. ಮಂಜು ಅವರು ರಾಜ್ಯದಲ್ಲಿರುವ ಕ್ಲಬ್‌ಗಳ ಆಸ್ತಿ ವಿವರ ನೋಂದಣಿ ಪ್ರಕ್ರಿಯೆ, ಅವುಗಳ ಕಾರ್ಯನಿರ್ವಹಣೆ, ಲೆಕ್ಕಪತ್ರಗಳ ನಿರ್ವಹಣೆ, ಸದಸ್ಯರಿಗೆ ಸಮರ್ಪಕ ಸೇವೆ ನೀಡುತ್ತಿವೆಯೇ, ಶುಲ್ಕಪಾವತಿ, ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚಿಸಲಾಗುವುದು ಎಂದ ಅವರು ಈ ಹಿಂದೆ ಸಮಯಾಭಾವದಿಂದ ಬೆಂಗಳೂರಿನ ಕ್ಲಬ್‌ಗಳ ಬಗ್ಗೆ ಪರಿಶೀಲನೆ ನಡೆಸಲಾಗಿತ್ತು. ಅಗತ್ಯ ಬಿದ್ದಲ್ಲಿ**

ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಕ್ಲಬ್‌ಗಳಿಗೂ ಬೇಟಿ ನೀಡಿ ಪರಿಶೀಲನೆ ನಡೆಸಿ ಏಪ್ರಿಲ್ 30 ನೇ ತಾರೀಖಿನ ಒಳಗಾಗಿ ಸಲಹೆ ಸೂಚನೆಗಳೊಂದಿಗೆ ರಚನಾತ್ಮಕ ವರದಿ ತಯಾರಿಸಿ ಸದನದಲ್ಲಿ ಮಂಡಿಸಲಾಗುವುದು ಎಂದರು.

ಈ ಹಿಂದೆ 2012 ರಲ್ಲಿ ಸದನ ಸಮಿತಿ ರಚಿಸಲಾಗಿತ್ತು ಎಂದ ಸಮಿತಿಯ ಅಧ್ಯಕ್ಷ ಶ್ರೀ ಎ. ಮಂಜು ಸಮಿತಿಯು ಕಾಲಾವಕಾಶದ ಕೊರತೆಯಿಂದಾಗಿ ವಿಸ್ತೃತ ವರದಿಯನ್ನು ಸಲ್ಲಿಸಲಾಗಿರಲಿಲ್ಲ. ಮಧ್ಯಂತರ ವರದಿಯನ್ನು ಮಾತ್ರ ಸಲ್ಲಿಸಲಾಗಿತ್ತು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿಧಾನ ಸಭೆಯ ಕಾರ್ಯದರ್ಶಿ ಶ್ರೀ ಓಂಪ್ರಕಾಶ್ ಅವರು ಸಮಿತಿಯ ರಚನೆ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಿತಿಯ ಸದಸ್ಯರು, ವಿಧಾನ ಸಭೆಯ ಉಪ ಕಾರ್ಯದರ್ಶಿ ಶ್ರೀಮತಿ ವಿಶಾಲಾಕ್ಷಿ, ಅಧೀನ ಕಾರ್ಯದರ್ಶಿ ಶ್ರೀ ಕುಮಾರಸ್ವಾಮಿ ಇತರರು ಉಪಸ್ಥಿತರಿದ್ದರು.

ಬಾಬು/ಕೆಪಿಪಿ/ಕೆಎಂ

## ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನಗೊಳ್ಳಲು ಅಭಿಮತ ಕೋರಿಕೆ

ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)

ರಾಜ್ಯ ಜಲಸಂಪನ್ಮೂಲ ಇಲಾಖೆಗೆ ಹೊಸದಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ. ಈ ನೇಮಕಾತಿ ನಿಯಮಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೇಮಕಗೊಂಡು, ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಇಲಾಖೆಗಳಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ನೌಕರರು, ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ಜನವರಿ 25 ರೊಳಗಾಗಿ ತಮ್ಮ ಅಭಿಮತವನ್ನು ತಿಳಿಸಲು ಸೂಚಿಸಿದೆ. ಈ ಸಂಬಂಧ ಅಂತಿಮ ವೃಂದ ಮತ್ತು ನೇಮಕಾತಿ ನಿಯಮ ಅಭಿಮತ ಇಚ್ಛಾಪತ್ರದ ನಮೂನೆಗಾಗಿ ಜಲಸಂಪನ್ಮೂಲ ಇಲಾಖೆಯ ಅಂತರ್ಜಾಲ **www.waterresources.kar.nic.in** ನ್ನು ಸಂಪರ್ಕಿಸುವಂತೆ ಪ್ರಕಟಣೆ ಕೋರಿದೆ.

ಬಾಬು/ಕೆಎಂ

## ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೆಷನ್ಸ್ 2014 ನೇ ಸಾಲಿನ ಗ್ರೂಫ್ ಎ ಮತ್ತು ಬಿ ವೃಂದದ 440 ಹುದ್ದೆಗಳನ್ನು ಭರ್ತಿ ಮಾಡಲು ಜನವರಿ 22 ರಂದು ಅಧಿಸೂಚನೆ ಹೊರಡಿಸಲಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಫೆಬ್ರವರಿ 22 ರಿಂದ ಫೆಬ್ರವರಿ 20 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಶುಲ್ಕ ಪಾವತಿಸಲು ಫೆಬ್ರವರಿ 21 ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳನ್ನು ಆಯೋಗದ ಅಂತರ್ಜಾಲ **http://kpsc.kar.nic.in/Notification** ನಲ್ಲಿ ನೋಡಬಹುದು.

ಬಾಬು/ಕೆಎಂ

# ಸಚಿವರ ಪ್ರವಾಸ

**ಬೆಂಗಳೂರು, ಜನವರಿ 21 (ಕರ್ನಾಟಕ ವಾರ್ತೆ)**

**ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಜನವರಿ 22 ರಂದು ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.**

**ಬಾಬು/ಕೆಎಂ**

# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಇ(1)1000/2014–15/ಪಿಎಸ್‌ಸಿ ದಿನಾಂಕ:22–01–2015

## ಸಂಕ್ಷಿಪ್ತ ಅಧಿಸೂಚನೆ

ಅಧಿಸೂಚನೆ ಸಂಖ್ಯೆ: ಇ(1)999/2014–15/ಪಿಎಸ್‌ಸಿ ದಿನಾಂಕ:22–01–2015ರನ್ವಯ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997 ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ನಿಯಮಗಳಡಿಯಲ್ಲಿ 2014ರ ಸಮೂಹ 'ಎ' ಮತ್ತು 'ಬಿ' ವೃಂದದ **440** ಹುದ್ದೆಗಳನ್ನು ಭರ್ತಿ ಮಾಡಲು ಆಯೋಗವು **ದಿನಾಂಕ:19–04–2015ರಂದು** ನಡೆಸುವ ಪೂರ್ವಭಾವಿ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳಿಂದ ON-LINE ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ:22–01–2015 ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:20–02–2015ರ ರಾತ್ರಿ 11.45 ಗಂಟೆ ಆಗಿದ್ದು, ಅರ್ಜಿಗಳನ್ನು **ON LINE** ಮೂಲಕ ಭರ್ತಿ ಮಾಡಿ **ಪರೀಕ್ಷಾ ಶುಲ್ಕವನ್ನು ದಿನಾಂಕ:21–02–2015ರ ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ ಕರ್ನಾಟಕದ ಯಾವುದಾದರೂ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (Computerized Post Offices Only)** ಮಾತ್ರ ಸಂದಾಯ ಮಾಡಬಹುದಾಗಿರುತ್ತದೆ.

**ವಿದ್ಯಾರ್ಹತೆ:–** ಅಭ್ಯರ್ಥಿಯು ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಯಾವುದೇ ವಿಶ್ವ ವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಪರಂತು, ಅಭ್ಯರ್ಥಿಗಳು ಯಾವುದಾದರೂ ಪದವಿ ಪರೀಕ್ಷೆಗೆ ಹಾಜರಾಗಿದ್ದು, ಆಯೋಗವು ನಡೆಸುವ ಪೂರ್ವಭಾವಿ ಪರೀಕ್ಷೆಗೆ ಶೈಕ್ಷಣಿಕವಾಗಿ ಅರ್ಹರಾಗುವುದಾದಲ್ಲಿ, ಆದರೆ ಆ ಪರೀಕ್ಷೆಯ ಫಲಿತಾಂಶ ಪ್ರಕಟಗೊಳ್ಳದೇ ಇದ್ದಲ್ಲಿ, ಅಂತಹ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.

**ಪರೀಕ್ಷೆಯ ಪ್ರಯತ್ನಗಳು:–** 1997ರ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ನಿಯಮಗಳಡಿ ಸೂಚಿಸಿರುವ ಪ್ರಯತ್ನಗಳ ಜೊತೆಗೆ

**ಸರ್ಕಾರದ ದಿನಾಂಕ:24–11–2014ರ ಅಧಿಸೂಚನೆಯನ್ವಯ "ಸದರಿ ಅಧಿಸೂಚನೆಗೆ ಹಾಗೂ (Subsequent Notification) ಮುಂದಿನ ನೇಮಕಾತಿಗಾಗಿ ಹೊರಡಿಸಬಹುದಾದ ಅಧಿಸೂಚನೆಗೆ ಮಾತ್ರ ಅನ್ವಯವಾಗುವಂತೆ ನಿಯಮಗಳನ್ವಯ ಅರ್ಹವಿರುವ ಎಲ್ಲಾ ಅಭ್ಯರ್ಥಿಗಳಿಗೆ ಎರಡು ಹೆಚ್ಚಿನ ಪ್ರಯತ್ನಗಳನ್ನು ನೀಡಲಾಗಿರುತ್ತದೆ".**

**ವಯೋಮಿತಿ:–** ಕನಿಷ್ಟ 21 ವರ್ಷ, ಗರಿಷ್ಠ ವಯೋಮಿತಿ: ಸಾಮಾನ್ಯ ವರ್ಗ–35ವರ್ಷ, 2ಎ/2ಬಿ/3ಎ/3ಬಿ–38ವರ್ಷ, ಪ.ಜಾ/ಪ.ಪಂ/ಪ್ರವರ್ಗ–1–40 ವರ್ಷ. ಮಾಜಿ ಸೈನಿಕರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆಯುಂಟು. ಅಂಗವಿಕಲರು ಮತ್ತು ವಿಧವೆಯರಿಗೆ ವಯೋಮಿತಿಯಲ್ಲಿ 10 ವರ್ಷಗಳ ಸಡಿಲಿಕೆಯುಂಟು. **ಸರ್ಕಾರದ ದಿನಾಂಕ:05–12–2014ರ ಆದೇಶದನ್ವಯ ಸದರಿ ಅಧಿಸೂಚನೆಗೆ ಹಾಗೂ ಮುಂದಿನ ನೇಮಕಾತಿಗಾಗಿ ಹೊರಡಿಸಬಹುದಾದ ಅಧಿಸೂಚನೆಗೆ ಮಾತ್ರ ಅನ್ವಯವಾಗುವಂತೆ, ನಿಯಮಗಳನ್ವಯ ಅರ್ಹವಿರುವ ಎಲ್ಲ ಅಭ್ಯರ್ಥಿಗಳಿಗೆ 02 ವರ್ಷಗಳ ವಯೋಮಿತಿ ಸಡಿಲಿಕೆ ನೀಡಲಾಗಿದೆ.**

**ಪರೀಕ್ಷಾ ಶುಲ್ಕ:–** ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–1 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ []. 25/–. ಇತರೆ ಅಭ್ಯರ್ಥಿಗಳಿಗೆ []. 300/–

**ಹೆಚ್ಚಿನ ವಿವರಗಳಿಗೆ ಆಯೋಗದ ವೆಬ್‌ಸೈಟ್ http://kpsc.kar.nic.in /Notification ಅನ್ನು ನೋಡುವುದು.**

**ಸಹಿ/–**

**(ಮನೋಜ್ ಕುಮಾರ್ ಮೀನಾ)**
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

# KARNATAKA PUBLIC SERVICE COMMISSION

No.E(1)1000 /2014-15/PSC Date:22-01-2015.

## ABSTRACT NOTIFICATION

Applications are invited by the Commission through ON-LINE as per Notification No. E(1) 999/2014-15/PSC dated:22-01-2015 from eligible candidates for recruitment to **440** posts of Gazetted Probationer's Group 'A' and 'B'- 2014 as per the Karnataka Recruitment of Gazetted Probationers (Appointment by Competitive Examinations) Rules, 1997 and as amended from time to time.

The date of commencement of filing the application through ON-LINE is 22-01-2015 and the last date for filing the application is 20-02-2015 (Before 11.45 PM.) The last date for payment of application fee is 21-02-2015. **The candidates must pay the application fee at any of the**

**Computerized Post Offices in Karnataka within the working hours of the Post Offices.**

**QUALIFICATION**:- No candidate shall be eligible for recruitment under these rules unless he possesses Bachelor's Degree or Master's Degree awarded by a University established by Law in India or possess an equivalent qualification. Provided that, candidates who have appeared for an examination, passing of which would render them educationally qualified for preliminary examination conducted by the Commission, but the results of which have not been declared, are also eligible for admission to such preliminary examination.

**Attempts at the Examination**:- As prescribed in the Karnataka Recruitment of Gazetted Probationers (Appointment by Competitive Examinations) Rules, 1997 every candidate appearing for the examination, who is otherwise eligible, shall be permitted for any number of attempts as prescribed as per the rules and also As per the Government Notification dated:24-11-2014 "**in respect of this notification and for the subsequent notification to be issued for the next immediate recruitment, candidate who are otherwise eligible shall be allowed two more attempts over and above the eligible number of attempts".**

**AGE LIMIT**:- Minimum age is 21 years and maximum age: General Merit-35 years, 2A/2B/3A/3B-38 years, SC/ST/Cat.1-40 years. For Ex-servicemen age relaxation is given as per rules. Ten years age relaxation is given for Physically Handicapped person and Widow. In accordance with the Government Notification dated:05-12-2014, for the respective notification and the subsequent notification only, 2 years of the age relaxation will be given to the eligible candidates as per the existing rules.

**Examination Fee:-** Candidates belonging to SC/ST/Category-I and Ex-servicemen []. 25/- Others []. 300/-

**For further details visit the Commission's Web Site http://kpsc.kar.nic.in /Notification.**

**Sd/-**

**(MANOJ KUMAR MEENA)**
Secretary,
Karnataka Public Service Commission.